# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 401(500) |
| ಸದಸ್ಯರ ಹೆಸರು | : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 10.07.2023 |
| ಉತ್ತರಿಸಬೇಕಾದ ಸಚಿವರು | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು |

| ಪ್ರಶ್ನೆ | ಉತ್ತರ |
|---|---|
| **ಅ)** ಸರ್ಕಾರವು ಪಠ್ಯ ಪರಿಷ್ಕರಣೆ ಸಮಿತಿ ರಚನೆ ಮಾಡಿದ್ದು ಯಾವಾಗ; ಎನ್.ಸಿ.ಎಫ್ ಪ್ರಕಾರ ಸಮಿತಿ ಅಧ್ಯಕ್ಷರು ಸದಸ್ಯರ ಪಟ್ಟಿ ಒದಗಿಸುವುದು; ಪಠ್ಯ ಪರಿಷ್ಕರಣೆಗಿರುವ ನಿಯಮಾವಳಿಗಳೇನು; | ಪಠ್ಯ ಪರಿಷ್ಕರಣೆ ಸಮಿತಿ ರಚನೆ ಮಾಡಿರುವುದಿಲ್ಲ. ಹಾಗಾಗಿ ಅನ್ವಯಿಸುವುದಿಲ್ಲ.<br>ಪಠ್ಯ ಪರಿಷ್ಕರಣೆಗಿರುವ ನಿಯಮಾವಳಿಗಳ ಪ್ರತಿಯನ್ನು ಅನುಬಂಧ-1ರಲ್ಲಿರಿಸಿದೆ |
| **ಆ)** ಎನ್.ಸಿ.ಎಫ್ ನಿಯಮಾವಳಿಗಳ ಪ್ರಕಾರ ಪಠ್ಯ ಪರಿಷ್ಕರಣೆ ಮಾಡಿರುವುದು ನಿಯಮಗಳ ವಿರುದ್ಧವಾಗಿದೆಯೆಂಬುದು ನಿಜವೇ; ಪಠ್ಯ ಪರಿಷ್ಕರಣೆಗೆ ಸಮಿತಿಯನ್ನು ರಚಿಸಲಾಗಿದೆಯೇ; ಯಾವ ಆಧಾರದ ಮೇಲೆ ಮಾಡಲಾಗಿದೆ; ಸಮಿತಿಯ ಶಿಫಾರಸ್ಸುಗಳೇನು; ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದು ತಿಂಗಳಲ್ಲೇ ಯಾವುದೇ ಸಮಿತಿ ರಚನೆಯಿಲ್ಲದೇ ಶಿಫಾರಸಿಲ್ಲದೇ ಸಭೆಯನ್ನು ನಡೆಸದೇ ಪರಿಷ್ಕರಣೆ ಮಾಡಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು)<br>**ಇ)** ಆದೇಶ ಸಂಖ್ಯೆ : ಇಪಿ:151:ಪಿಎಂಸಿ:2023, ಬೆಂಗಳೂರು, ದಿನಾಂಕ : 17.06.2023ರ ಆದೇಶದಲ್ಲಿ ಹೊರಡಿಸಲಾದಂತಹ ತಿದ್ದುಪಡಿ, ಬದಲಾಯಿಸಿದ ಪಾಠ ಸೇರಿಸಿದ ಪಾಠ, ಪಾಠದಲ್ಲಿ ಅಂಶಗಳನ್ನು ಯಾವ ಹಾಗೂ ಯಾರ ಶಿಫಾರಸ್ಸಿನ ಆಧಾರದ ಮೇಲೆ ಆದೇಶ ಹೊರಡಿಸಲಾಗಿದೆ; | ವಿಷಯ ತಜ್ಞರುಗಳ ಶಿಫಾರಸ್ಸಿನ ಮೇರೆಗೆ ಪಠ್ಯಪುಸ್ತಕ ಪರಿಷ್ಕರಿಸಿ ವಿಷಯಾಂಶಗಳ ಬದಲಾವಣೆಗೆ ತಿದ್ದೋಲೆ ಹೊರಡಿಸಲಾಗಿದೆ |
| **ಈ)** ಯಾವ್ಯಾವ ಪಠ್ಯಗಳನ್ನು ಹಾಗೂ ಯಾವ ಕಾರಣಕ್ಕಾಗಿ ಬದಲಾಯಿಸಲಾಗಿದೆ; ಈ ಹಿಂದೆ ಇದ್ದಂತಹ ಪಠ್ಯಗಳನ್ನು ತೆಗೆದುಹಾಕಲು ಕಾರಣ ಹಾಗೂ ಪ್ರಸ್ತುತ ಸೇರ್ಪಡೆಗೊಳಿಸಲಾಗಿರುವ ಪಠ್ಯಗಳ ವಿವರಗಳೊಂದಿಗೆ ತರಗತಿಗಳವಾರು ಮಾಹಿತಿ | ಅನುಬಂಧ-2ರಲ್ಲಿರಿಸಿದೆ |

| | |
|---|---|
| ನೀಡುವುದು ಹಾಗೂ ತೆಗೆದು ಹಾಕಲಾದ ಪಠ್ಯದ ವಿವರಗಳನ್ನು ತರಗತಿಗಳವಾರು ವಿಷಯವಾರು ನೀಡುವುದು; | |
| **ಉ)** ಈ ವರ್ಷದ ಪಠ್ಯ ಪುಸ್ತಕ ಈಗಾಗಲೇ ಶಾಲೆಗಳಿಗೆ / ಮಕ್ಕಳಿಗೆ ವಿತರಿಸಲಾಗಿದೆಯೇ; ವಿತರಿಸಿದ್ದಲ್ಲಿ ಬದಲಾಯಿಸಿದ ಪಠ್ಯ ಪುಸ್ತಕವನ್ನು ಶಾಲೆಗಳಿಗೆ ತಲುಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; ಇದಕ್ಕೆ ತಗಲಬಹುದಾದ ಅಂದಾಜು ವೆಚ್ಚವೆಷ್ಟು; (ಸಂಪೂರ್ಣ ಮಾಹಿತಿಯನ್ನು ನೀಡುವುದು) | 2023-24ನೇ ಸಾಲಿನ ಪಠ್ಯಪುಸ್ತಕಗಳನ್ನು ಈಗಾಗಲೇ ವಿತರಿಸಲಾಗಿದೆ.<br>ಪಠ್ಯಪುಸ್ತಕಗಳಲ್ಲಿ ಬದಲಾವಣೆಯಾಗಿರುವ ವಿಷಯಾಂಶಗಳಿಗೆ ತಿದ್ದೋಲೆಯನ್ನು ಸಿದ್ಧಪಡಿಸಿ, ಶಾಲೆಗಳಿಗೆ ವಿತರಿಸಲಾಗುತ್ತಿದೆ.<br>ತಿದ್ದೋಲೆ ಪುಸ್ತಕವನ್ನು ಮುದ್ರಿಸಿ ಶಾಲೆಗಳಿಗೆ ಸರಬರಾಜು ಮಾಡಲು ಅಂದಾಜು ವೆಚ್ಚ ರೂ. 26,12,232 (ರೂ. ಇಪ್ಪತ್ತಾರು ಲಕ್ಷದ ಹನ್ನೆರಡು ಸಾವಿರದ ಇನ್ನೂರ ಮೂವತ್ತೆರಡು ಮಾತ್ರ) |
| **ಊ)** ಪರಿಷ್ಕರಣೆ ಪಠ್ಯ ಪುಸ್ತಕ ಬದಲಾವಣೆಯಿಂದಾಗಿ ಮಕ್ಕಳಲ್ಲಿ ಗೊಂದಲ ಉಂಟಾಗುವುದಿಲ್ಲವೇ; ಹಿಂದಿನ ಪಠ್ಯ ಪುಸ್ತಕಗಳಲ್ಲಿನ ನ್ಯೂನತೆಗಳಾವುವು ಹಾಗೂ ಪಠ್ಯ ಪುಸ್ತಕವನ್ನು ಬದಲಾಯಿಸುವಂತೆ ಸಮಿತಿಯು / ಸಾರ್ವಜನಿಕರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆಯೇ; ಮಾಡಿದ್ದಲ್ಲಿ, ಪ್ರತಿಯನ್ನು ಒದಗಿಸುವುದು? | ಪಠ್ಯಪುಸ್ತಕಗಳ ಕೆಲವು ವಿಷಯಾಂಶಗಳ ಬದಲಾವಣೆಯಿಂದ ಮಕ್ಕಳಲ್ಲಿ ಯಾವುದೇ ಗೊಂದಲ ಉಂಟಾಗುವುದಿಲ್ಲ. ಏಕೆಂದರೆ 2023-24ನೇ ಸಾಲಿನಲ್ಲಿ ಪರಿಶೀಲಿಸಿ ಬದಲಾವಣೆಗೆ ಸೂಚಿಸಿರುವ ವಿಷಯಾಂಶಗಳನ್ನು ತಿದ್ದೋಲೆಯ ರೂಪದಲ್ಲಿ ಸಿದ್ಧಪಡಿಸಿ, ಈಗಾಗಲೇ ಕರ್ನಾಟಕ ಪಠ್ಯಪುಸ್ತಕ ಸಂಘದ ವೆಬ್‌ಸೈಟ್‌ನಲ್ಲಿ (ktbs.kar.nic.in) soft ಪ್ರತಿಯನ್ನು ಅಳವಡಿಸಲಾಗಿದ್ದು, ಈ ಬಗ್ಗೆ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಸುತ್ತೋಲೆ ಮೂಲಕ ಮಾಹಿತಿ ನೀಡಲಾಗಿದೆ. ತಿದ್ದೋಲೆ ಪ್ರತಿಗಳನ್ನು ಮುದ್ರಿಸಿ, ತಾಲ್ಲೂಕು ಹಂತದಿಂದ ಶಾಲೆಗಳಿಗೆ ವಿತರಣಾ ಕಾರ್ಯ ಪ್ರಗತಿಯಲ್ಲಿದೆ. |

ಇಪಿ 173 ಪಿಎಂಸಿ 2023

(ಎಸ್. ಮಧು ಬಂಗಾರಪ್ಪ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಸಚಿವರು.

ಅನುಬಂಧ-1

ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮತ್ತು
# ಎನ್.ಸಿ.ಎಫ್. ಆಧಾರಿತ
# ಕರ್ನಾಟಕ ಪಠ್ಯಕ್ರಮ ಮಾರ್ಗದರ್ಶಿ ತತ್ವಗಳು

[illegible] ಸಂಶೋಧನೆ ಮತ್ತು ತರಬೇತಿ ಇಲಾಖೆ
ಮತ್ತು
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು

## ಅಧ್ಯಾಯ – 2

# ಎನ್.ಸಿ.ಎಫ್ 2005ರ ಮುಖ್ಯ ಲಕ್ಷಣಗಳು, ಮಾರ್ಗದರ್ಶಿ ತತ್ವಗಳು ಮತ್ತು ಸಾರಾಂಶ

1986 ರ ರಾಷ್ಟ್ರೀಯ ಶಿಕ್ಷಣ ನೀತಿ ಒಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಹುಟ್ಟುಹಾಕುವ ಪ್ರಯತ್ನ ಆರಂಭಿಸಿತ್ತು. 1992 ಕ್ರಿಯಾ ಯೋಜನೆಯಲ್ಲಿ ಇದನ್ನು ಇನ್ನೂ ವಿವರವಾಗಿಯೂ ಸ್ಪಷ್ಟವಾಗಿಯೂ ಹೇಳಲಾಗಿತ್ತು. ಈ ಎಲ್ಲ ಬದಲಾವಣೆಗಳ ಮೂಲದಲ್ಲಿ ಸಂವಿಧಾನದಲ್ಲಿ ಶಿಫಾರಸು ಮಾಡಲಾದ ಮೌಲ್ಯಗಳೇ ಇದ್ದವು. Egalitarian, secular, pluralistic society founded on social justice and equality ಈ ಅಂಶಗಳನ್ನು ಆಧರಿಸಿಯೇ ರಾ.ಪ.ಚೌ05ರ ಮೂಲ ಆಶಯಗಳು ಇದ್ದವು.

## 2.1 ಮುಖ್ಯ ಲಕ್ಷಣಗಳು

ಎನ್.ಸಿ.ಎಫ್ 2005ರ ಮುಖ್ಯ ಲಕ್ಷಣಗಳು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದಾಗಿದೆ. ಕೆಲವು ಪ್ರಧಾನವಾದ ಅಂಶಗಳನ್ನು ಈ ಕೆಳಕಂಡಂತೆ ಗುರುತಿಸಿದೆ.

- ಭಾರತ ಸಂವಿಧಾನದಲ್ಲಿ ನೆಲಗೊಂಡಿರುವ ಮೌಲ್ಯಗಳು.
- ಪಠ್ಯಕ್ರಮ ವಿಧಿಸುವ ಹೊರೆಯನ್ನು ಕಡಿಮೆ ಮಾಡುವುದು.
- ಎಲ್ಲರಿಗೂ ಗುಣಾತ್ಮಕ ಶಿಕ್ಷಣ (ಇ.ಎಫ್.ಎ) ದೊರಕಿಸುವುದು.
- ವ್ಯವಸ್ಥಿತ ಸುಧಾರಣೆಗೆ ಅನುವು ಮಾಡಿಕೊಡುವುದು.
- ಸರ್ವ ಸಮಾನ ಶಾಲಾ ವ್ಯವಸ್ಥೆಯನ್ನು ದೊರಕಿಸಿಕೊಡುವುದು.

ಇವುಗಳ ಆಧಾರದಲ್ಲಿಯೇ ಶಿಕ್ಷಣದ ಗುರಿಗಳನ್ನೂ ರೂಪಿಸಲಾಗಿತ್ತು. ಇವುಗಳೆಂದರೆ

- ಸ್ವತಂತ್ರ ಚಿಂತನೆ ಹಾಗೂ ಕ್ರಿಯಾಶೀಲತೆ
- ಇತರರ ಭಾವನೆಗಳಿಗೆ ಸ್ಪಂದಿಸುವಿಕೆ
- ಹೊಸ ಸನ್ನಿವೇಶಗಳಿಗೆ ನಮ್ಯ ಹಾಗೂ ಸೃಜನಶೀಲ ರೀತಿಯಲ್ಲಿ ಸ್ಪಂದಿಸುವಿಕೆ

ಶಿಕ್ಷಣವು ಪ್ರಜಾಸತ್ತಾತ್ಮಕ ಜೀವನ ಶೈಲಿಯನ್ನು ಗಟ್ಟಿಗೊಳಿಸಬೇಕಾದರೆ ಅದು ಮೊತ್ತಮೊದಲಿಗೆ ಪ್ರಥಮ ತಲೆಮಾರಿನ ಕಲಿಕಾರ್ಥಿಗಳನ್ನು ಶಾಲೆಯಲ್ಲಿಯೇ ಉಳಿಯುವಂತೆ ಮಾಡಬೇಕಾಗಿದೆ. ಶಿಕ್ಷಣ ಈಗ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕು. ಲಿಂಗ, ಮತ, ಜಾತಿ, ಅಂಗವಿಕಲತೆಗಳ ವ್ಯತ್ಯಾಸಗಳನ್ನು ಮೀರಿದ ಶಾಲಾ ವಾತಾವರಣವನ್ನು ನಿರ್ಮಿಸಿ, ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕ ಆಹಾರದ ಬಗ್ಗೆ ನಿಗಾವಹಿಸಬೇಕಾಗಿದೆ.

## 2.2 ಪಠ್ಯಕ್ರಮ ಅಭಿವೃದ್ಧಿಗೆ ಎನ್.ಸಿ.ಎಫ್ 2005 ಶ್ಲಾಘಿಸಿರುವ ಐದು ಮಾರ್ಗದರ್ಶಿ ತತ್ವಗಳನ್ನು.

ಕಲಿಕೆ ಹೊರೆಯಾಗಿರುವುದು ನಾವು ಶಿಕ್ಷಣದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಹಾಗೂ ಗುಣಾತ್ಮಕತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ತಪ್ಪಿದ್ದೇವೆ ಎಂಬುದಕ್ಕೆ ಸಾಕ್ಷಿ. ಇದನ್ನು ಸರಿಪಡಿಸಲು ರಾ.ಪ.ಚೌ–2005 ಐದು ಮಾರ್ಗದರ್ಶಿ ತತ್ವಗಳನ್ನು ಮುಂದಿಡುತ್ತದೆ. ಈ ಮಾರ್ಗದರ್ಶಿ ತತ್ವಗಳು ಅತ್ಯಂತ ಆಳವಾದ ಅರ್ಥವನ್ನು ಹೊಂದಿವೆ.

1. ಜ್ಞಾನವನ್ನು ಶಾಲೆಯ ಹೊರಗಿನ ಜೀವನಕ್ಕೆ ಸಂಬಂಧೀಕರಿಸುವುದು.
2. ಕಲಿಕಾ ಪ್ರಕ್ರಿಯೆಯಲ್ಲಿ ಬಾಯಿಪಾಠ ಮಾಡುವ ವಿಧಾನಗಳಿಂದ ಹೊರಬರುವುದನ್ನು ಖಚಿತಪಡಿಸಿಕೊಳ್ಳುವುದು.
3. ಪಠ್ಯಕ್ರಮವು ಪಠ್ಯಪುಸ್ತಕಗಳನ್ನು ಮೀರಿ ನಿಲ್ಲುವಂತೆ ಶ್ರೀಮಂತಗೊಳಿಸುವುದು.
4. ಪರೀಕ್ಷೆಗಳನ್ನು ಹೆಚ್ಚು ನಮ್ಯ ಮಾಡುವುದು ಹಾಗೂ ತರಗತಿಯ ಕಲಿಕಾ ಪ್ರಕ್ರಿಯೆಗಳೊಂದಿಗೆ ಸಮ್ಮಿಳಿತಗೊಳಿಸುವುದು
5. ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆಯಲ್ಲಿ ಪರಸ್ಪರ ಶ್ರದ್ಧೆ ಹಾಗೂ ಪ್ರೀತಿಗಳುಳ್ಳ ಕಾಳಜಿಗಳನ್ನು ಬೆಳೆಸುವುದು. (nurturing an overriding identity informed by caring concerns within the democratic polity of the country)

### 3.2 ಪಠ್ಯಕ್ರಮ ಮರುಪರಿಶೀಲನಾ ಮಾರ್ಗದರ್ಶಿ ಅಂಶಗಳು :

ಎನ್.ಸಿ.ಎಫ್ 2005ನಲ್ಲಿ ಉದ್ಧರಿಸಲಾಗಿರುವ ಐದು ಮಾರ್ಗದರ್ಶಿ ತತ್ವಗಳಲ್ಲದೆ ಪಠ್ಯಕ್ರಮ ಮರುಪರಿಶೀಲನೆಯಲ್ಲಿ ಪರಿಗಣಿಸಬೇಕಾದ ಇನ್ನುಳಿದ ಕೆಲವು ಮುಖ್ಯ ಸಂಗತಿಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

1. ಪಠ್ಯಕ್ರಮ ಮರುಪರಿಶೀಲನೆ ಮಾಡುವಾಗ ಶಾಲಾ ವ್ಯವಸ್ಥೆಯ ಮೂರು ಮುಖ್ಯ ಹಂತಗಳಾದ- ಕಿರಿಯ ಪ್ರಾಥಮಿಕ ಹಂತ, ಹಿರಿಯ ಪ್ರಾಥಮಿಕ ಹಂತ ಮತ್ತು ಪ್ರೌಢ ಶಿಕ್ಷಣ ಹಂತ– ಇವುಗಳನ್ನು ಗಮನದಲ್ಲಿರಿಸಿಕೊಂಡು ಮಗುವು ಒಂದು ಹಂತದಿಂದ ಮುಂದಿನ ಹಂತಕ್ಕೆ ಸರಾಗವಾಗಿ ಮುಂದುವರಿಯುವಂತೆ ಈ ಮೂರು ಹಂತಗಳ ನಡುವೆ ಸೂಕ್ತ ಸಂಬಂಧ ಇರಬೇಕು.
2. ಮಕ್ಕಳು ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸಾಗಲು ಕಲಿಕಾ ಕೊಂಡಿಗಳು ಮತ್ತು ಕಲಿಕೆಯಲ್ಲಿ ನಿರಂತರತೆ ಕಲ್ಪಿಸಬೇಕು.
3. ಮಕ್ಕಳ ಮಾನಸಿಕ ಬೆಳವಣಿಗೆಗೆ ಸೂಕ್ತವಾಗಿ ಸ್ಪಂದಿಸುವಂತಹ ವಿಷಯ ಮತ್ತು ಪ್ರಕರಣಗಳಿರುವಂತೆ ಪಠ್ಯವಸ್ತು ಮುತುವರ್ಜಿ ವಹಿಸಬೇಕು.
4. ಮಾಹಿತಿಗಾಗಿ ಮಾಹಿತಿಯನ್ನು ಕೊಡುವುದನ್ನು ಕೈಬಿಡಬೇಕು.
5. ಮಕ್ಕಳ ದೈನಂದಿನ ಅನುಭವಗಳು ಮತ್ತು ಶಾಲೆಯಲ್ಲಿ ಕಲಿಯುವ ವಿವಿಧ ವಿಷಯಗಳ ಜ್ಞಾನಗಳ ನಡುವೆ ಅರ್ಥವತ್ತಾದ ಸೇತುವೆಯನ್ನು ನಿರ್ಮಿಸಬೇಕು.
6. ವಿಭಿನ್ನ ವಿಷಯಗಳ ನಡುವೆ ಉದ್ದೇಶಿತ ಸಂಬಂಧಗಳನ್ನು ಕ್ರೋಢೀಕರಿಸಿ, ಅಂತರ್ಶಿಸ್ತಿಗೆ ಒಳಪಡಿಸಬೇಕು.
7. ಲಿಂಗ, ಜಾತಿ, ವರ್ಗ ಸಮಾನತೆ, ಆರೋಗ್ಯ ಮತ್ತು ವಿವಿಧ ವರ್ಗಗಳ ಮಕ್ಕಳ ಆವಶ್ಯಕತೆಗಳ ಬಗೆಗೆ ಸೂಕ್ಷ್ಮತೆ ಇರಬೇಕು.
8. ವಿವಿಧ ರೀತಿಯ ಮಕ್ಕಳ–ಪ್ರತಿಭಾವಂತ, ಸಾಧಾರಣ, ನಿಧಾನ ಕಲಿಕೆಯ, ದೈಹಿಕ ಸವಾಲು ಎದುರಿಸುವ (ವಿಕಲ ಚೇತನ) ಮಕ್ಕಳ ಅವಶ್ಯಕತೆಗಳಿಗೆ ಪೂರಕವಾಗುವಂತೆ ಪಠ್ಯಕ್ರಮ ಮತ್ತು ಪಠ್ಯಪುಸ್ತಕ ಮರು ಪರಿಶೀಲನೆಯಾಗಬೇಕು.
9. ಪರಿಸರ ಸಂಬಂಧೀ ಜ್ಞಾನ, ಕೆಲಸಕ್ಕೆ ಸಂಬಂಧಿಸಿದ ಮನೋಕಾಂಕ್ಷೆಗಳ ಕ್ರೋಡೀಕರಣ ಮಾಡಬೇಕು ಮತ್ತು ಮೌಲ್ಯಗಳನ್ನು ಸೂಕ್ತ ಸಂಧರ್ಭಗಳಲ್ಲಿ ಸೇರಿಸಬೇಕು.
10. ಲಲಿತ ಕಲೆಗಳ, ಭಾರತೀಯ ಪರಂಪರೆಯ, ಕುಶಲ ಕಸುಬುಗಳ ಬಗ್ಗೆ ಪ್ರಶಂಸೆಯನ್ನು ಬೆಳೆಸಿಕೊಳ್ಳುವಂತೆ ಪಠ್ಯಕ್ರಮದಲ್ಲಿ ಅವಕಾಶಗಳಿರಬೇಕು.
11. ವಿಭಿನ್ನ ರೀತಿಯ ಶಿಕ್ಷಕರು, ಕಲಿಕಾ ಪ್ರಕ್ರಿಯೆಯನ್ನು ಹೆಚ್ಚಿನ ಪ್ರಾವೀಣ್ಯತೆಯಿಂದ ಹಾಗೂ ಸೃಜನಶೀಲತೆಯಿಂದ ನಿರ್ವಹಿಸುವಂತೆ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಲ್ಲಿ ಅವಕಾಶಗಳಿರಬೇಕು ಮತ್ತು ಸಡಿಲ ನೀತಿಗಳಿರಬೇಕು.

# ಅಧ್ಯಾಯ – 6

# ಪಠ್ಯ ಪುಸ್ತಕ ರಚನೆ

ಪ್ರತಿ ವಿಷಯದ ಪಠ್ಯಕ್ರಮ ಮತ್ತು ಪಠ್ಯವಸ್ತುಗಳು ಪಠ್ಯಪುಸ್ತಕದ ರಚನಾ ತಂಡಕ್ಕೆ ಪಾಠದ ಒಳಹುರುಳು, ಅದರ ವ್ಯಾಪ್ತಿ, ಉದ್ದೇಶಗಳು ಮತ್ತು ಕಲಿಕಾ ಪ್ರಯೋಗಗಳ ಮಾರ್ಗದರ್ಶನ ನೀಡುತ್ತದೆ. ಆದ್ದರಿಂದ ಸದೃಢ ವೈಜ್ಞಾನಿಕ ಮತ್ತು ಮನೋ ವೈಜ್ಞಾನಿಕ ತಳಹದಿಯ ಮೇಲೆ ಪಠ್ಯಕ್ರಮಗಳು ಅಳವಡಿಸಿರುವ ಚೌಕಟ್ಟಿನೊಳಗಿರುವಂತೆ ಪಠ್ಯ ಪುಸ್ತಕಗಳ ರಚನೆಯಾಗಬೇಕಿದೆ.

ಒಂದು ಒಳ್ಳೆಯ ಪಠ್ಯ ಪುಸ್ತಕ ಕಲಿಯುವವರಿಗೆ ಸಂಪೂರ್ಣ ಅನುಭವಗಳನ್ನೂ ಪ್ರತಿಬಿಂಬಿಸಿರಬೇಕು. ಪಠ್ಯಪುಸ್ತಕ ಮಗುವಿನ ಸ್ನೇಹಿಯಾಗಿರಬೇಕು ಹಾಗೂ ಮನೋ ವೈಜ್ಞಾನಿಕ ತತ್ವಗಳನ್ನಾಧರಿಸಿರಬೇಕು.

ಪಠ್ಯ ಪುಸ್ತಕ ಸಮಿತಿಗಳು ವಿಷಯ ತಜ್ಞರು ಮತ್ತು ಅನುಭವೀ ಶಾಲಾ ಶಿಕ್ಷಕರನ್ನು ಒಳಗೊಂಡಿರಬೇಕು. ತರಗತಿಯಲ್ಲಿ ಬೋಧಿಸುವಾಗ ಎದುರಾಗುವ ಕ್ಲಿಷ್ಟತೆಗಳನ್ನು, ಒಂದು ಪರಿಕಲ್ಪನೆಯನ್ನು ವಿವರಿಸುವಾಗ ಬಳಸುವ ಮಾರ್ಗೋಪಾಯಗಳನ್ನು ಕುರಿತ ಮಾಹಿತಿಯನ್ನು ಶಿಕ್ಷಕರು ಕೊಡಬಹುದು.

ಪಠ್ಯಕ್ರಮ ಮತ್ತು ಪಠ್ಯಪುಸ್ತಕದ ಬದಲಾವಣೆಯ ಕಾರಣಗಳನ್ನು ಪಠ್ಯ ಪುಸ್ತಕ ರಚನಾ ಸಮಿತಿಯ ಸದಸ್ಯರಿಗೆ ತಿಳಿದಿರಬೇಕು. ಆದ್ದರಿಂದ ಅವರಿಗೆ ಪಠ್ಯಕ್ರಮ ಮತ್ತು ಪಠ್ಯವಸ್ತು ಮರುಪರಿಶೀಲನೆಯ ದೃಷ್ಟಿಕೋನಗಳನ್ನು ಪರಿಚಯಿಸುವ ಕಾರ್ಯಾಗಾರಗಳನ್ನು ಏರ್ಪಡಿಸಬೇಕು. .

***ಪಠ್ಯಪುಸ್ತಕ ರಚನಾಕಾರರಿಗೆ ಮಾರ್ಗದರ್ಶಿ ನೀತಿಗಳು ಕೆಳಕಂಡಂತಿವೆ.***

- ಶಿಶು ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಅವಕಾಶ
- ಸಾಮಾಜಿಕ ಕಾಳಜಿಗಳ ಸೇರ್ಪಡೆ
- ಸಮಗ್ರ ದೃಷ್ಟಿಕೋನ ಮತ್ತು ಎಲ್ಲಾ ವಿಷಯಗಳ ಸಂಪೂರ್ಣ ಸಾರ್ವತ್ರಿಕ ಅನುಭವಗಳನ್ನು ಮೂಡಿಸುವ ಮಾರ್ಗ ಅನುಸರಣೆ
- ಪರಿಕಲ್ಪನೆಗಳನ್ನು ಗ್ರಹಿಸಲು ಚಟುವಟಿಕೆಗಳ ಬಳಕೆ
- ಶಿಶುವೇ ಜ್ಞಾನ ರಚನೆ ಮಾಡಿಕೊಳ್ಳುವಂತೆ ಏರ್ಪಾಡು
- ಪರಿಸರದ ಕಾಳಜಿಗಳು ಮತ್ತು ಪರಿಸರ ಸಂರಕ್ಷಣೆ
- ಪಾಠದ ಒಳಹುರುಳು ಜ್ಞಾನದ, ಪಾಠ ವಿಷಯದ, ಕಾರ್ಯವಿಧಾನದ, ಇತಿಹಾಸದ, ಪರಿಸರದ ಹಾಗೂ ನೈತಿಕವಾದ ಅರ್ಹತೆಗಳಿಗೆ ಒಳಪಡಬೇಕು.
- ಪಠ್ಯಪುಸ್ತಕವು ಸುಲಭವಾಗಿ ಓದುವಂತಿರಬೇಕು. ವಿಶೇಷವಾಗಿ, ಶಿಕ್ಷಕರು ಬಹುಕಾಲ ಗೈರುಹಾಜರಾದ ಸಂದರ್ಭದಲ್ಲಿ, ವಿದ್ಯಾರ್ಥಿ ಸ್ವತಃ ತಾನೇ ಓದಿ ಸಾರಾಂಶವನ್ನು ಅರ್ಥಮಾಡಿಕೊಳ್ಳುವಂತಿರಬೇಕು.
- ಅಧಿಕೃತ ಪಠ್ಯಕ್ರಮದಲ್ಲಿ ನಿರೂಪಿಸಿರುವ ಚೌಕಟ್ಟಿನೊಳಗೆ, ಪಠ್ಯಪುಸ್ತಕದ ಮುಖ್ಯೋದ್ದೇಶಗಳಿಗೆ ಅನುಗುಣವಾಗುವಂತೆ ಪಠ್ಯಪುಸ್ತಕಗಳನ್ನು ರಚಿಸಬೇಕು.
- ಎಲ್ಲಾ ಹಂತಗಳಲ್ಲೂ, ಶಾಲಾ ಶಿಕ್ಷಕರನ್ನೊಳಗೊಂಡಿರುವ ಪಠ್ಯಪುಸ್ತಕ ಆಯ್ದ ಶಾಲೆಗಳಲ್ಲಿ ಪ್ರಯೋಗಗಳು ಬಹುವ್ಯಾಪಕವಾಗಿ ನಡೆಯಬೇಕು. ಈ ರೀತಿಯ ಪ್ರಯೋಗಗಳು, ಸಂಶೋಧನೆ ಮತ್ತು ಹಿಮ್ಮಾಹಿತಿ ಪ್ರಕ್ರಿಯೆ ಪಠ್ಯಪುಸ್ತಕದ ಅಭಿವೃದ್ಧಿಯ ವ್ಯವಸ್ಥಾತ್ಮಕ ರಚನಾ ವಿಧಿಯಾಗಿ ಬಿಡಬೇಕು.

- ಹೊರೆಯಾಗದಂತೆ ಪಠ್ಯಪುಸ್ತಕಗಳನ್ನು ಅನುಕೂಲಕರವಾಗಿ, ಭಾಗಗಳಾಗಿ ವಿಭಾಗಿಸಬೇಕು. ಸೆಮಿಸ್ಟರ್ ಪದ್ಧತಿಯ ಪಠ್ಯಪುಸ್ತಕಗಳನ್ನು ಸೆಮಿಸ್ಟರ್ ಅವಧಿಗನುಸಾರವಾಗಿ ವಿಭಾಗಿಸಿ ತಯಾರಿಸಲು ಉತ್ತೇಜಿಸಬೇಕು.
- ಪಾಠದ ವಿಷಯ, ಮನೋವೈಜ್ಞಾನಿಕವಾಗಿ, ಕಲಿಯುವವರಿಗೆ ತಾವೇ ತಮ್ಮ ಅನುಭವದಿಂದ ಜ್ಞಾನವನ್ನು ರಚಿಸಿಕೊಳ್ಳುವಂತಿರಬೇಕು.
- ಪಠ್ಯಪುಸ್ತಕಗಳು ಮಕ್ಕಳಲ್ಲಿ ಕಲಿಯುವ ಆಕಾಂಕ್ಷೆ ಮತ್ತು ಕುತೂಹಲಗಳನ್ನು ಕೆರಳಿಸಿ, ಕಲಿಕೆಯಲ್ಲಿ ನಿರತರಾಗುವಂತೆ ಮಾಡಬೇಕು.
- ಪಠ್ಯಪುಸ್ತಕದಲ್ಲಿ ವಿವಿಧ ರೀತಿಯಲ್ಲಿ ವಿನ್ಯಾಸಗೊಳಿಸಿದ ಚಟುವಟಿಕೆಗಳಿರಬೇಕು. ಕಾಲಾಂತರದಲ್ಲಿ ಒಂದು ಕಲಿಕಾನುಭವ ಪುನರ್ಭವಿಸಲು ವಿಭಿನ್ನ ಸಲಕರಣೆಗಳಿಂದ ಪುನರಾವರ್ತನೆಗೊಳ್ಳಲೂ ಅವಕಾಶ ಕಲ್ಪಿಸಿಕೊಡಬೇಕು.
- ಪಠ್ಯಪುಸ್ತಕದ ಚಟುವಟಿಕೆಗಳು ಸ್ಥಳೀಯ ಸಂಪನ್ಮೂಲವನ್ನು ಬಳಸಿಕೊಳ್ಳಬೇಕು. ಸ್ಥಳೀಯ, ನಿರ್ದಿಷ್ಟ ಮಾಹಿತಿಗೆ ಅವಕಾಶ ಕೊಡಬೇಕು (ಉದಾ.: ವಾಕ್ಯಾಂತ ಪ್ರಶ್ನೆ ಕೊಡುವಿಕೆ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲದ ಸಂಗ್ರಹ ಇತ್ಯಾದಿ)
- ಮಗುವಿನ ಕಲ್ಪನೆಗೆ ಪಠ್ಯಪುಸ್ತಕದಲ್ಲಿ ಎಚ್ಚರವಹಿಸಿ ಅವಕಾಶಗಳನ್ನು ನೀಡಬೇಕು.
- ಪಠ್ಯಪುಸ್ತಕದಲ್ಲಿ ಅಭ್ಯಾಸ ಮಾಡಲು ಅವಕಾಶವಿರಬೇಕು.
- ಪಠ್ಯಪುಸ್ತಕದಲ್ಲಿ ಗುಂಪು ಚಟುವಟಿಕೆಗಳಿಗೆ ಸ್ಥಾನ ಕಲ್ಪಿಸಿರಬೇಕು.
- ಪಠ್ಯಪುಸ್ತಕ ರಚಿಸುವಾಗ ಒಂದು ವರ್ಷದಲ್ಲಿ ಲಭ್ಯವಿರುವ ಒಟ್ಟು ಕಲಿಕಾವಧಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.
- ವರ್ತುಲೀಯ ಕಲಿಕಾಭ್ಯಾಸಕ್ಕೆ (Spiral Learning) ಪಠ್ಯಪುಸ್ತಕದಲ್ಲಿ ಸ್ಥಾನ ಕಲ್ಪಿಸಿರಬೇಕು.
- ಪಠ್ಯಪುಸ್ತಕದಲ್ಲಿ ಸ್ವ-ಮೌಲ್ಯಮಾಪನ ವಿಧಾನಗಳೂ ಮೈಗೂಡಿಕೊಂಡಿರಬೇಕು, ಇವುಗಳಲ್ಲಿ ಮಕ್ಕಳ ಇತರೆ ಕಲಿಕಾನುಭವದಷ್ಟೇ ಪ್ರೋತ್ಸಾಹ ಕೊಡುವಂತಿರಬೇಕು. ಚಟುವಟಿಕೆಗಳಲ್ಲಿ ಭಾಗವಹಿಸುವಂತೆ, ಇದರಲ್ಲಿ ಸಹ ಭಾಗವಹಿಸಬೇಕು.
- ಲಿಂಗ ಸಮಾನತೆ ವಿಷಯಕ್ಕೆ ಸ್ಥಾನ ಇರಿಸಿರಬೇಕು.
- ಮೌಲ್ಯಗಳು ಕಾರ್ಯಪ್ರವೃತ್ತವಾಗುವಂತಹ ಸನ್ನಿವೇಶಗಳು ಪಠ್ಯಪುಸ್ತಕದಲ್ಲಿರಬೇಕು.
- ಸಮಕಾಲೀನ ಸವಾಲುಗಳನ್ನು ಮಗು ಎದುರಿಸುವ ಮನೋಭಾವ ಬೆಳೆಸುವ ಹಾಗೆ ಪಠ್ಯಪುಸ್ತಕ ರಚನೆಯಾಗಿರಬೇಕು.
- ಮಗುವಿನ ಸಾಮರ್ಥ್ಯವನ್ನು ಹೊರಹೊಮ್ಮಿಸುವಂತೆ ಪಠ್ಯಪುಸ್ತಕ ರಚನೆಯಾಗಿರಬೇಕು.
- ಮಗುವು ತಾನೇ ಆಲೋಚಿಸಿ/ಕಾರ್ಯಪ್ರವೃತ್ತವಾಗಿ ಕಲಿಯುವಂತೆ ಪಠ್ಯಪುಸ್ತಕ ರಚನೆಯಾಗಿರಬೇಕು.
- ಮಕ್ಕಳು ಸೃಜನಾತ್ಮಕರಾಗಿ, ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುವಂತೆ ಪಠ್ಯಪುಸ್ತಕ ಅವಕಾಶಗಳನ್ನು ನೀಡಬೇಕು.
- ಈಗಾಗಲೇ ಅಭ್ಯಸಿಕೊಂಡಿರುವ ತಪ್ಪು ಗ್ರಹಿಕೆಗಳನ್ನು ಕೈ ಬಿಡಲು ಪಠ್ಯಪುಸ್ತಕ ನೆರವೀಯಬೇಕು.
- ಕಲಿಕಾನುಭವಗಳು ಮತ್ತು ಸಂಧರ್ಭಗಳನ್ನು ಮಕ್ಕಳು ಅನ್ಯೋನ್ಯ ಭಾವನೆಯಿಂದ ತಾವೇ ಒಗ್ಗೂಡಿ ಕಲಿಯಲು ಉತ್ತೇಜಿಸುವಂತೆ ಪಠ್ಯಪುಸ್ತಕದಲ್ಲಿ ಅವಕಾಶಗಳನ್ನು ಕಲ್ಪಿಸಬೇಕು ಮತ್ತು ಈ ಸಂಧರ್ಭಗಳು ಮಕ್ಕಳ ವಯೋಧರ್ಮಕ್ಕೆ ಅನುಗುಣವಾಗಿರಬೇಕು.
- ಕಾರಣ ಮತ್ತು ಪರಿಣಾಮದ ಪ್ರಕಲ್ಪನೆಗಳು ಒಂದು ವೇಳೆ ಪಠ್ಯಪುಸ್ತಕದಲ್ಲಿ ಸೇರಿಸಲೇಬೇಕಾದರೆ, ಅದು ಮಕ್ಕಳ ಅನುಭವಕ್ಕೆ ಮೀರಿರಬಾರದು.
- ಮನೆಯೊಳಗೂ ಸಹ ಕೈಗೊಳ್ಳಬಹುದಾದಂತಹ ಚಟುವಟಿಕೆಗಳನ್ನು ಒಳಗೊಂಡಿರುವಂತೆ ಪಠ್ಯಪುಸ್ತಕ ರಚನೆಯಾಗಬೇಕು.

- ಮಕ್ಕಳಲ್ಲಿರುವ ವೈಯಕ್ತಿಕ ಭಿನ್ನತೆಗಳನ್ನು ಸ್ಪಂದಿಸುವಂತೆ ಪಠ್ಯಪುಸ್ತಕವಿರಬೇಕು.
- ಹೆಣ್ಣುಮಕ್ಕಳು, ಪರಿಶಿಷ್ಟ ವರ್ಗದ ಗಿರಿಜನ ಮಕ್ಕಳು, ಏಕಲಚೇತನ ಮಕ್ಕಳು, ಮಂದಗತಿ ಕಲಿಕೆಯ ಮಕ್ಕಳು ಮತ್ತು ದುಡಿಯುವ ಮಕ್ಕಳನ್ನು ಗಮನದಲ್ಲಿರಿಸಿಕೊಂಡು ಪಠ್ಯಪುಸ್ತಕ ರಚನೆಯಾಗಬೇಕು.
- ಒಂದು ವಿಷಯದಲ್ಲಿ ಶಿಕ್ಷಕರು ಪಾಂಡಿತ್ಯವನ್ನು ಹೊಂದದೆಯಿದ್ದಲ್ಲಿ, ಅಂತಹ ಶಿಕ್ಷಕರಿಗೆ ಪಠ್ಯಪುಸ್ತಕವು ಬೋಧನೆಗೆ ಒಂದು ಸಂಪನ್ಮೂಲವಾಗುವಂತೆ ರಚನೆಯಾಗಬೇಕು.
- ಶಿಕ್ಷಕರ ಕಾರ್ಯಚಟುವಟಿಕೆಗಳು ಸಂತೋಷದಾಯಕ, ಪರಿಣಾಮಕಾರಿ ಮತ್ತು ವಸ್ತು ನಿಷ್ಠೆಯನ್ನು ಕೂಡಿಕೊಂಡಿರುವಂತೆ ಪಠ್ಯಪುಸ್ತಕಗಳು ಸೌಕರ್ಯದಾಯಕವಾಗಬೇಕು.
- ಪಾಠಪುಸ್ತಕವು, ಶಿಕ್ಷಕರು ಬೋಧನೆಗೆ ಪೂರ್ವ ಸಿದ್ಧರಾಗುವಂತೆ ನೆರವಾಗಿ, ಇದರ ಫಲವಾಗಿ ಮಕ್ಕಳ ಕಲಿಕಾ ದಕ್ಷತೆಯು ಅಭಿವೃದ್ಧಿಗೊಳ್ಳಬೇಕು.

**ಭಾಷೆಗಳು**

1. ಭಾಷೆಗಳಲ್ಲಿ ಆಯ್ಕೆಯನ್ನು ಉದ್ಧೃತಗಳು, ಕತೆಗಳು, ಕವಿತೆಗಳನ್ನು ಉತ್ತಮ ಗುಣಮಟ್ಟದ ಕೃತಿಗಳು, ಪ್ರಸಿದ್ಧ ಲೇಖಕರು ಮತ್ತು ಕವಿಗಳಿಂದಲೇ ಚುನಾಯಿಸಬೇಕು.
2. ಶ್ರೇಷ್ಠ ವ್ಯಕ್ತಿಗಳು, ರಾಷ್ಟ್ರ ನಾಯಕರು, ವಿಜ್ಞಾನಿಗಳು, ಕವಿಗಳು ಮತ್ತು ಸಾಹಿತ್ಯ ಕೋವಿದರ ಆಯ್ಕೆಗಳನ್ನೂ ಸರ್ವಾಂಗೀಣವಾಗಿ ಎಲ್ಲಾ ತರಗತಿಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು, ಅವರವರೇ ವ್ಯಕ್ತಿಗಳನ್ನು ಪದೇ ಪದೇ ತರಗತಿಯಾದ ಮೇಲೆ ಮುಂದಿನ ತರಗತಿಯಲ್ಲೂ ಓದಿ ಓದಿ ಬೇಸರಪಡದಂತೆ, ಎಚ್ಚರದಿಂದ ಮಾಡಬೇಕು.
3. ದ್ವಿತೀಯ ಮತ್ತು ತೃತೀಯ ಭಾಷೆಗಳ ಪಾಠ ಸೂಚಿ ಸಿದ್ಧಪಡಿಸುವವರು ಮತ್ತು ಪಠ್ಯಪುಸ್ತಕ ಲೇಖಕರಿಗೆ ಮಾರ್ಗದರ್ಶನಗಳನ್ನು ಸಿದ್ಧಪಡಿಸಬೇಕಾಗಿದೆ.

**ವಿಜ್ಞಾನ ಪಠ್ಯಪುಸ್ತಕಗಳು**

- ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಚಟುವಟಿಕೆಗಳು ಮತ್ತು ಪ್ರಯೋಗಗಳು ವ್ಯಾಪಕವಾಗಿ ಸಮಗ್ರತೆಯನ್ನು ಹೊಂದಿರಬೇಕು.
- ಬಹು ಸಂಖ್ಯೆಯ ಶಿಕ್ಷಕರು ಪ್ರಯೋಗ ಮಾಡದೆ ಕಪ್ಪು ಹಲಗೆ ಮತ್ತು ಸೀಮೆ ಸುಣ್ಣ ಮಾತ್ರ ಬಳಸಿ ತೃಪ್ತಿ ಪಟ್ಟುಕೊಳ್ಳುವುದರಿಂದ, ವೀಕ್ಷಣಾಧಿಕಾರಿಗಳು ಭೇಟಿ ನೀಡಿದಾಗ ದೃಢೀಕರಿಸಿಕೊಳ್ಳುವಂತೆ, ಪ್ರತಿ ಪಠ್ಯಪುಸ್ತಕದಲ್ಲೂ ಶಾಲಾ ಕೊಠಡಿಯಲ್ಲೇ ಮಾಡಲೇಬೇಕಾದ ಪ್ರಯೋಗಗಳ ಪಟ್ಟಿಯನ್ನು ನಿರೂಪಿಸಬೇಕು.
- ಶಾಲಾ ವಿಜ್ಞಾನ ಸಂಘಗಳು ಶಾಲೆಯಲ್ಲಿ ತೆಗೆದುಕೊಳ್ಳಬಹುದಾದ ಹೆಚ್ಚುವರಿ ಪ್ರಯೋಗಗಳನ್ನು ಪಠ್ಯಪುಸ್ತಕ ನಮೂದಿಸಿರಬೇಕು.
- ವಿಜ್ಞಾನದ ಪಠ್ಯಪುಸ್ತಕದಲ್ಲಿ ಜ್ಞಾನ, ಗ್ರಹಿಕೆ, ವಿವೇಚನೆ ಮತ್ತು ಅನ್ವಯ – ಇವುಗಳಿಗೆ ಒತ್ತು ನೀಡಬೇಕು.
- ಪ್ರಶ್ನಿಸುವ ಮತ್ತು ವಿಜ್ಞಾನದ ಆವಿಷ್ಕರಣಗಳಲ್ಲಿ ತೊಡಗಿಸುವ ಅವಕಾಶಗಳನ್ನು ಕಲ್ಪಿಸಬೇಕು.
- ಪಾಠದ ಒಳಹುರುಳು ಹಂತ ಹಂತವಾಗಿ ಪ್ರತಿ ಹಂತದಲ್ಲಿ ವಿಶ್ಲೇಷಿಸಿರಬೇಕು.
- ವೀಕ್ಷಣೆ, ದತ್ತಾಂಶಗಳ ಸಂಗ್ರಹ, ದತ್ತಾಂಶಗಳ ಕ್ರೋಢೀಕರಣ ಮತ್ತು ಊಹೆಮಾಡುವ ಅವಕಾಶಗಳನ್ನು ಕಲ್ಪಿಸುವುದು. ಈ ಮಾಹಿತಿಗಳ ಸಂಪನ್ಮೂಲ – ವೀಕ್ಷಣೆಯಿಂದ, ಶಿಕ್ಷಕರಿಂದ, ಸಮುದಾಯದ ವ್ಯಕ್ತಿಗಳಿಂದ, ಯೋಜನೆಗಳಿಂದ, ಅಂತರ ಜಾಲದಿಂದ ಆಗಿರಬಹುದು.
- ಪಾಠದ ಒಳಹುರುಳಿಗೂ, ಪರಿಸರದಲ್ಲಾಗುವ ಕ್ರಿಯೆಗಳಿಗೂ ಕೊಂಡಿಯನ್ನು ಕಲ್ಪಿಸಬೇಕು. ಸ್ಥಳೀಯ ವಿಷಯಗಳಿಂದ ಕ್ರಮೇಣ ವಿಶ್ವದ ವಿಷಯಗಳಿಗೆ ತಲುಪಬೇಕು.

ಅನುಬಂಧ 2

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2023-24ನೇ ಸಾಲಿಗೆ 6 ರಿಂದ 10ನೇ ತರಗತಿ ಕನ್ನಡ ಭಾಷೆ ಮತ್ತು 6 ರಿಂದ 10ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿನ ಕೆಲವು ಅಂಶಗಳನ್ನು ಪರಿಶೀಲಿಸಿ, ತಿದ್ದೋಲೆಯನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು ರವರ ಏಕ ಕಡತ ಸಂಖ್ಯೆ ಕ.ಪ.ಪು.ಸಂ/ಟಿ.ಎ2/ಪ.ಪು.ತಿ/1/2023-24, ದಿನಾಂಕ: 14.06.2023.

* * *

**ಪ್ರಸ್ತಾವನೆ:**

2022-23ನೇ ಸಾಲಿನಲ್ಲಿ ಪರಿಷ್ಕೃತವಾಗಿ, ಪ್ರಸ್ತುತ ಚಾಲ್ತಿಯಲ್ಲಿರುವ ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಹೊಸದಾಗಿ ಸೇರ್ಪಡೆಯಾಗಿರುವ ಪಾಠ/ಪದ್ಯಗಳು ಹಾಗೂ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಸೇರ್ಪಡೆಗೊಳಿಸಿರುವ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ, 6 ರಿಂದ 10ನೇ ತರಗತಿ ಕನ್ನಡ ಭಾಷೆ ಮತ್ತು 6 ರಿಂದ 10ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕಗಳ ವಿಷಯಾಂಶಗಳನ್ನು ವಿಷಯ ತಜ್ಞರೊಂದಿಗೆ ಸಮಾಲೋಚಿಸಿ, ಅವರು ಸೂಚಿಸಿರುವ ಅಗತ್ಯ ಅಂಶಗಳಿಗೆ ತಿದ್ದೋಲೆಯನ್ನು ಹೊರಡಿಸುವ ಸಂಬಂಧ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 151 ಪಿಎಂಸಿ 2023,**
**ಬೆಂಗಳೂರು: ದಿನಾಂಕ: 17-06-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2023-24ನೇ ಸಾಲಿಗೆ ಸರಬರಾಜು ಆಗಿರುವ 6 ರಿಂದ 10ನೇ ತರಗತಿ ಕನ್ನಡ ಭಾಷೆ ಮತ್ತು 6 ರಿಂದ 10ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿನ ಕೆಲವು ಅಂಶಗಳನ್ನು ಪರಿಶೀಲಿಸಿ, ಇದರೊಂದಿಗೆ ಲಗತ್ತಿಸಿರುವ ಅನುಬಂಧ 1, 2 & 3 ರಲ್ಲಿರುವ ಅಂಶಗಳನ್ನು ಅಳವಡಿಸಲು ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Hosamath 17/6/2023
**(ಮಹಾಂತಯ್ಯ ಎಸ್. ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.

2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು - **(ಒಂದು ವಾರದೊಳಗಾಗಿ ಸದರಿ ಆದೇಶದಲ್ಲಿನ ತಿದ್ದೋಲೆಗಳನ್ನು ಮುದ್ರಿಸಿ, ಸರಬರಾಜು ಮಾಡಲು ಕ್ರಮವಹಿಸುವುದು)**
3. ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ(ರಿ.), ಹೊಸಕೆರೆಹಳ್ಳಿ, ಬೆಂಗಳೂರು - 560085.
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು.
6. ನಿರ್ದೇಶಕರು (ಪ್ರಾಥಮಿಕ / ಪ್ರೌಢಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
7. ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ.
8. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ.
9. ಮಾಹಿತಿ ಕೇಂದ್ರ / ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ (ಮಾಹಿತಿಗಾಗಿ):**

1. ಸನ್ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರ ಆಪ್ತ ಕಾರ್ಯದರ್ಶಿ.
5. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿ (ಆಡಳಿತ)(ಸೇವೆಗಳು) / ಉಪ ಕಾರ್ಯದರ್ಶಿ (ಸೇವೆಗಳು 2) ಹಾಗೂ ಎಲ್ಲಾ ಅಧೀನ ಕಾರ್ಯದರ್ಶಿಗಳು.

ಅನುಬಂಧ - 3

<u>ಸರ್ಕಾರದ ಆದೇಶ ಸಂಖ್ಯೆ: ಇಪಿ 151 ಪಿಎಂಸಿ 2023, ಬೆಂಗಳೂರು; ದಿನಾಂಕ:17-06-2023ಕ್ಕೆ ಅನುಬಂಧ – 2</u>

## 2023–24ನೇ ಸಾಲಿಗೆ ತಿದ್ದೋಲೆ

## ಕನ್ನಡ ಪ್ರಥಮ ಭಾಷೆ

| ಕ್ರ ಸಂ | ತರಗತಿ | ಬದಲಾಯಿಸಿದ ಪಾಠ/ಸೇರಿಸಿದ ಪಾಠ/ಪಾಠದಲ್ಲಿನ ವಿಷಯದ ವಿವರ |
|---|---|---|
| 1. | 6ನೇ ತರಗತಿ | 'ನೀ ಹೋದ ಮರುದಿನ' (ಪದ್ಯ)ಕಲ್ಯಾಣ ಕರ್ನಾಟಕ ಮೂಲದ ಕನ್ನಡದ ಪ್ರಸಿದ್ಧ ಕವಿ ಚೆನ್ನಣ್ಣ ವಾಲೀಕಾರ ಅವರು ಡಾ. ಅಂಬೇಡ್ಕರ್ ಅವರ ಬಗ್ಗೆ ಬರೆದಿರುವ ಕವನ. ಇದನ್ನು ಬದಲಾಯಿಸಲು ಸೂಕ್ತ ಕಾರಣವೇ ಇಲ್ಲ. ಈ ಕವನವನ್ನು ಬೋಧನೆ ಮಾಡಬೇಕು. ಇದನ್ನು ತೆಗೆದು ಸೇರಿಸಿರುವ 'ನಮ್ಮದೇನಿದೆ?' ಪದ್ಯವನ್ನು ಬೋಧನೆ ಮಾಡಬಾರದು, ಕೈ ಬಿಡಬೇಕು. |
| 2. | 7ನೇ ತರಗತಿ | 'ಸಾವಿತ್ರಿಬಾಯಿ ಪುಲೆ' (ಗದ್ಯ) – ಲೇಖಕಿ: ಡಾ. ಎಚ್.ಎಸ್. ಅನುಪಮ. ಇವರು ಕನ್ನಡದ ಪ್ರಸಿದ್ಧ ಲೇಖಕಿ. ಸಾವಿತ್ರಿಬಾಯಿ ಪುಲೆಯವರನ್ನು ಕುರಿತ ಇವರ ಬರಹವನ್ನು ತೆಗೆದು ಸಾವಿತ್ರಿಬಾಯಿ ಪುಲೆಯವರನ್ನೇ ಕುರಿತ ಇನ್ನೊಬ್ಬ ಲೇಖಕರ ಬರಹವನ್ನು ಸೇರಿಸಲು ಸೂಕ್ತ ಕಾರಣಗಳಿಲ್ಲ. ಆದ್ದರಿಂದ ಡಾ. ಅನುಪಮ ಅವರ ಬರಹವನ್ನು ಬೋಧಿಸಬೇಕು.<br><br>(ಹೊಸದಾಗಿ ಸೇರಿಸಿರುವ ಬರಹದಲ್ಲಿ ಸಾವಿತ್ರಿಬಾಯಿ ಪುಲೆಯವರ ಬಗ್ಗೆ ಏಕವಚನ ಬಳಸಲಾಗಿದೆ.)<br><br>ಹೊಸದಾಗಿ ಸೇರ್ಪಡೆಗೊಂಡ 'ಸಾಮಾಜಿಕ ಕಳಕಳಿಯ ಮೊದಲ ಶಿಕ್ಷಕಿ' ಪಾಠವನ್ನು ಬೋಧಿಸಬಾರದು. |
| . | 8ನೇ ತರಗತಿ | 'ಮಗಳಿಗೆ ಬರೆದ ಪತ್ರ' (ಪೂರಕಗದ್ಯ) – ಇದನ್ನು ಬರೆದವರು ಕನ್ನಡದ ಹೆಸರಾಂತ ಇತಿಹಾಸಕಾರರೂ, ಪತ್ರಕರ್ತರೂ, ಲೇಖಕರೂ ಆದ ತಿ. ತಾ. ಶರ್ಮ ಅವರು. ನೆಹರು ಅವರು ತಮ್ಮ ಮಗಳಿಗೆ ಬರೆದ ಪತ್ರಗಳನ್ನು ಒಳಗೊಂಡ ಈ ಬರಹವು ಚಾರಿತ್ರಿಕವೂ ಭಾವ ಸಂಬಂಧಿಯೂ ಆಗಿದೆ. ಇದನ್ನು ಕೈ ಬಿಡಲು ಕಾರಣಗಳಿಲ್ಲ ಎಂದು ಭಾವಿಸಲಾಗಿದ್ದು, ಬೋಧಿಸಬೇಕೆಂದು ತಿಳಿಸಲಾಗಿದೆ.<br><br>ಈ ಪಾಠದಜಾಗದಲ್ಲಿ 'ಭೂ ಕೈಲಾಸ' ಎಂಬ ನಾಟಕದ ಭಾಗವನ್ನು ಸೇರಿಸಿದ್ದು ಅದನ್ನು ಬೋಧನೆಯಿಂದ ಕೈ ಬಿಡಬೇಕು. |

17/1/2023

| ಕ್ರ ಸಂ | ತರಗತಿ | ಬದಲಾಯಿಸಿದ ಪಾಠ/ಸೇರಿಸಿದ ಪಾಠ/ಪಾಠದಲ್ಲಿನ ವಿಷಯದ ವಿವರ |
|---|---|---|
| 4. | 10ನೇ ತರಗತಿ | ಕನ್ನಡದ ಖ್ಯಾತ ಲೇಖಕಿ ಸಾ.ರಾ. ಅಬೂಬಕರ್ ಅವರ'**ಯುದ್ಧ**' ಎಂಬ ಕತೆಯನ್ನು ಉಳಿಸಿಕೊಂಡು ಬೋಧಿಸಬೇಕು. ಹೊಸದಾಗಿ ಸೇರಿಸಿರುವ '**ಶ್ರೇಷ್ಠ ಭಾರತೀಯ ಚಿಂತನೆಗಳು**' ಎಂಬ ಬರಹದ ಶೀರ್ಷಿಕೆ ಚೆನ್ನಾಗಿದ್ದರೂ ಭಾರತೀಯ ಸಂವಿಧಾನಾತ್ಮಕ ಚಿಂತನೆಯ ವೈಜ್ಞಾನಿಕ ಮನೋಧರ್ಮಕ್ಕೆ ಪೂರಕವಾಗಿಲ್ಲ. ಭಾರತೀಯ ಚಿಂತನೆಯು ನಿಜವಾದ ಆಧ್ಯಾತ್ಮಿಕ ಹಾಗೂ ವೈಜ್ಞಾನಿಕ ಚಿಂತನೆಗಳ ಕಾರಣಕ್ಕೆ ಶ್ರೇಷ್ಠ ಎನ್ನಿಸಿಕೊಂಡಿದೆ. ಆದರೆ ಈ ಪಾಠದಲ್ಲಿ ಕೆಲವು ಅವೈಜ್ಞಾನಿಕ ಅಂಶಗಳ ಜೊತೆಗೆ ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗದ ಪರಿಭಾಷೆಯಿದೆ. ಆದ್ದರಿಂದ ಈ ಪಾಠವನ್ನು ಕೈ ಬಿಟ್ಟು ಹಿಂದಿನ ಪಠ್ಯಪುಸ್ತಕದಲ್ಲಿದ್ದ '**ಯುದ್ಧ**' ಎಂಬ ಕತೆಯನ್ನು ಮುಂದುವರಿಸಲಾಗಿದೆ. |
| 5. | 10ನೇ ತರಗತಿ | ಇಂದಿನ ಪಠ್ಯದಲ್ಲಿದ್ದ ಸುಕುಮಾರ ಸ್ವಾಮಿಯ ಕಥೆಯನ್ನು ಕೈಬಿಟ್ಟು ಶ್ರೀ ಹೆಡಗೇವಾರ ಅವರ '**ನಿಜವಾದ ಆದರ್ಶ ಪುರುಷ ಯಾರಾಗಿರಬೇಕು?**' ಎಂಬ ಬರಹವನ್ನು ಸೇರಿಸಲು ಸೂಕ್ತ ಕಾರಣಗಳಿಲ್ಲ. ಕನ್ನಡ ಸಾಹಿತ್ಯದ ಮೊದಲ ಗದ್ಯಗ್ರಂಥವಾದ 'ವಡ್ಡಾರಾಧನೆ'ಯಿಂದ ಆಯ್ಕೆ ಮಾಡಿಕೊಂಡಿರುವ '**ಸುಕುಮಾರ ಸ್ವಾಮಿಯಕಥೆ**' ಯು ಹಳಗನ್ನಡದ ಅಭ್ಯಾಸದಿಂದಲೂ ಮುಖ್ಯ. ಹೆಡಗೇವಾರ ಅವರ ಬರಹದಲ್ಲಿದ್ದ 'ಭಗವಾಧ್ವಜ' ಎಂಬ ಪದವನ್ನು 'ಧ್ವಜ' ಎಂದಷ್ಟೇ ಮಾಡಿ (ಅಥವಾ ತಿದ್ದಿ) ರಾಷ್ಟ್ರಧ್ವಜವೆಂಬ ಭಾವನೆ ಮೂಡಿಸಲಾಗಿದೆಯೆಂಬ ಆಕ್ಷೇಪ ಕೇಳಿ ಬಂದಿತ್ತು. ಈ ಬರಹದ ಲೇಖಕರು ಧಾರ್ಮಿಕ ಮೂಲಭೂತವಾದಿಯೆಂಬ ಆಕ್ಷೇಪವೂ ಸೇರಿ ವಿವಾದಕ್ಕೆ ಕಾರಣವಾಗಿತ್ತು. ಆದ್ದರಿಂದ, ಮಕ್ಕಳಿಗೆ ವಿವಾದಾತ್ಮಕ ನೆಲೆಗಳ ಅಗತ್ಯವಿಲ್ಲವೆಂದು ನಿರ್ಧರಿಸಿ, ಕನ್ನಡ ಅಸ್ಮಿತೆಯ 'ವಡ್ಡಾರಾಧನೆ' ಕೃತಿಯ ಕತೆಯನ್ನು ಬೋಧಿಸಬೇಕು. |
| 6. | 10ನೇ ತರಗತಿ | ಶ್ರೀ ಚಕ್ರವರ್ತಿ ಸೂಲಿಬೆಲೆಯವರ 'ತಾಯಿ ಭಾರತಿಯ ಅಮರ ಪುತ್ರರು' ಎಂಬ ಬರಹವು ಹೆಚ್ಚುವರಿಯಾಗಿ ಸೇರ್ಪಡೆಯಾಗಿದೆ. ಹೆಚ್ಚುವರಿಯಾಗಿ ಸೇರಿಸುವ ಅಗತ್ಯ ಇರಲಿಲ್ಲ. ಈ ಪಾಠದಲ್ಲಿರುವ ಭಗತ್ ಸಿಂಗ್ ಅವರನ್ನು ಕುರಿತ ವಿವರಗಳನ್ನು ಶ್ರೀ ಚಿದಾನಂದಮೂರ್ತಿ ಯವರ ಪ್ರತ್ಯೇಕ ಪಾಠದಲ್ಲೇ ಹೇಳಲಾಗಿದೆ. ಅಲ್ಲಿಯೇರಾಜ ಗುರು, ಸುಖದೇವ್ ಅವರ ಪ್ರಸ್ತಾಪವನ್ನು ಮಾಡಬಹುದಾಗಿದೆ. ಈ ಎಲ್ಲಾ ಕಾರಣಗಳ ಜೊತೆಗೆ ಲೇಖಕರು ಧಾರ್ಮಿಕ |



17/6/2023

8

| | | |
|---|---|---|
| | | ಮೂಲಭೂತವಾದದ ಪ್ರತಿಪಾದಕರಾಗಿರುವುದೂ ನಕಾರಾತ್ಮಕ ಅಂಶವಾಗಿದೆ. ಹೀಗಿದ್ದೂ ಪಠ್ಯ ವಿಷಯಗಳಲ್ಲಿ ಹೆಚ್ಚುವರಿಯಾಗಿ ಹೊಸ ಸೇರ್ಪಡೆ ಮಾಡಿರುವುದು ಸಮರ್ಥನೀಯವಲ್ಲ. ಆದ್ದರಿಂದ ಈ ಹೊಸ ಸೇರ್ಪಡೆಯನ್ನು ಬೋಧಿಸುವ ಅಗತ್ಯವಿಲ್ಲ. |
| 7. | 10ನೇ ತರಗತಿ | 10ನೇ ತರಗತಿಯ 14ನೇ ಪಾಠವಾದ 'ವೀರಲವ' ದ ಟಿಪ್ಪಣಿ ಭಾಗದಲ್ಲಿ ಮಹರ್ಷಿ ವಾಲ್ಮೀಕಿಯವರ ಬಗ್ಗೆ 'ದಾರಿಗಳ್ಳನಾಗಿದ್ದ' ಎಂದು ಉಲ್ಲೇಖಿಸಲಾಗಿದೆ. ಈ ಉಲ್ಲೇಖವನ್ನು ಕೈ ಬಿಡಬೇಕು. ವಾಲ್ಮೀಕಿಯವರ ಬಗ್ಗೆ ಏಕವಚನ ಬಳಸಿದ್ದು ಅದನ್ನು ಬಿಟ್ಟು ಬಹುವಚನವನ್ನು ಬಳಸಬೇಕು. ಮಹರ್ಷಿ ವಾಲ್ಮೀಕಿ ಯವರ ಕೊಡುಗೆಯನ್ನು ಅಧ್ಯಾಪಕರು ಸೂಕ್ತವಾಗಿ ಪರಿಚಯಿಸಬೇಕು. |

## ಕನ್ನಡ ದ್ವಿತೀಯ ಭಾಷೆ

| ಕ್ರ ಸಂ | ತರಗತಿ | ಬದಲಾಯಿಸಿದ ಪಾಠ/ಸೇರಿಸಿದ ಪಾಠ/ಪಾಠದಲ್ಲಿನ ವಿಷಯದ ವಿವರ |
|---|---|---|
| 8. | 8ನೇ ತರಗತಿ | 'ಬ್ಲಡ್‌ಗ್ರೂಪ್' (ಗದ್ಯ) – ಈ ಪಾಠವು ರಕ್ತಕ್ಕೆ ಜಾತಿ, ಮತ, ಧರ್ಮಗಳ ಕಟ್ಟಳೆಯಿಲ್ಲವೆಂದು ಸಾರುವ ಬರಹ. (ಲೇಖಕರು: ವಿಜಯಮಾಲ ರಂಗನಾಥ್) ಈ ಪಾಠವನ್ನು ಮಾನವೀಯ ಸಂದೇಶದ ಕಾರಣಕ್ಕಾಗಿ ಉಳಿಸಿಕೊಳ್ಳಬೇಕು. ಹೊಸದಾಗಿ ಸೇರ್ಪಡೆಯಾದ ಕೆ.ಟಿ. ಗಟ್ಟಿಯವರ 'ಕಾಲವನ್ನು ಗೆದ್ದವರು' ಪಾಠವನ್ನು ಬೋಧನೆಯಿಂದ ಕೈ ಬಿಡಬೇಕು. |
| | 9ನೇ ತರಗತಿ | 'ಉರುಸುಗಳಲ್ಲಿ ಭಾವೈಕ್ಯತೆ' (ಗದ್ಯ) ಲೇಖಕರು:ದಸ್ತಗೀರ ಅಲ್ಲೀಬಾಯಿ ಇದು ಭಾವೈಕ್ಯ ಭಾರತೀಯತೆಯನ್ನು ಒಳಗೊಂಡ ಪಾಠ. ಮಕ್ಕಳಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಭಾವಕ್ಕೆ ಪ್ರೇರಣೆ ನೀಡುತ್ತದೆ. ಆದ್ದರಿಂದ ಇದನ್ನು ಉಳಿಸಿಕೊಂಡು ಬೋಧಿಸಬೇಕು.<br>ಹೊಸದಾಗಿ ಸೇರ್ಪಡೆಯಾಗಿರುವ 'ಅಚ್ಚರಿಯಜೀವಿ ಇಂಬಳ' ಪಾಠವನ್ನು ಬೋಧನೆಯಿಂದ ಕೈ ಬಿಡಬೇಕು. ಇದು ಮಕ್ಕಳ ಗ್ರಹಿಕೆಗೆ ದಕ್ಕುವ ಪಾಠವಲ್ಲ. |

Hosamath 17/6/2023

(ಮಹಾಂತಯ್ಯ ಎಸ್. ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)

9

ಸರ್ಕಾರದ ಆದೇಶ ಸಂಖ್ಯೆ: ಇಪಿ 151 ಪಿಎಂಸಿ 2023, ಬೆಂಗಳೂರು; ದಿನಾಂಕ:17-06-2023 ಕ್ಕೆ

ಅನುಬಂಧ – 3

## 2023–24ನೇ ಸಾಲಿಗೆ ತಿದ್ದೋಲೆ

## ವಿಷಯ : ಸಮಾಜ ವಿಜ್ಞಾನ

ತರಗತಿ :6ನೇ ತರಗತಿ ಭಾಗ–I

| ಬದಲಾಯಿಸಿದ/ಸೇರಿಸಿದ ಅಧ್ಯಾಯ | ಬದಲಾಯಿಸಿದ/ಸೇರಿಸಿದ ಪಾಠದ/ವಿಷಯದ ವಿವರ |
|---|---|
| (ಇತಿಹಾಸ) ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ | ವಾಕ್ಯ ಸೇರ್ಪಡೆ: ಪುಟ ಸಂಖ್ಯೆ 33ರಲ್ಲಿ ಕಲಬುರಗಿ ವಿಭಾಗವನ್ನು ಬೋಧಿಸುವಾಗ **"ಈ ವಿಭಾಗದ ಜಿಲ್ಲೆಗಳಿಗೆ ವಿಶೇಷ ನೆರವು ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಸಂವಿಧಾನದ ಅನುಚ್ಛೇದ 371 (ಜೆ) ಅಡಿಯಲ್ಲಿ ವಿಶೇಷ ಸ್ಥಾನಮಾನ ನೀಡಿದೆ"** ಈ ಅಂಶವನ್ನು ಸೇರ್ಪಡೆ ಮಾಡಿಕೊಂಡು ಬೋಧಿಸುವುದು. |
| ವೇದಕಾಲದ ಸಂಸ್ಕೃತಿ | 2017–18ನೇ ಸಾಲಿನ ಪಠ್ಯಪುಸ್ತಕದ ಈ ಅಧ್ಯಾಯವನ್ನು (ಪುಟ ಸಂ.: 73 ರಿಂದ 76ರವರೆಗೆ) ಸೇರ್ಪಡೆ ಮಾಡುವುದು. ಇದರಲ್ಲಿ 'ಧಾರ್ಮಿಕ ಜೀವನ' ಉಪ ಶೀರ್ಷಿಕೆಯ ಅಡಿಯಲ್ಲಿ ಯಾಗ ಯಜ್ಞಗಳ ಆಚರಣೆಯಿಂದ ಆಹಾರದ ಅಭಾವ ಉಂಟಾಯಿತು ಎಂಬ ವಿಷಯಾಂಶವನ್ನು ಕಲಿಕೆ ಮತ್ತು ಬೋಧನೆಗೆ ಪರಿಗಣಿಸಬಾರದು. |
| ಹೊಸ ಧರ್ಮಗಳ ಉದಯ | 2017–18ನೇ ಸಾಲಿನ ಪಠ್ಯಪುಸ್ತಕದ ಈ ಅಧ್ಯಾಯದಲ್ಲಿ ಪುಟ ಸಂಖ್ಯೆ: 82 ರಿಂದ 88ರವರೆಗೆ ಪೀಠಿಕಾ ಭಾಗವನ್ನು ಹೊರತುಪಡಿಸಿ, ಉಳಿದ ಅಂಶಗಳನ್ನು ಬೋಧನೆ ಮತ್ತು ಕಲಿಕೆಗೆ ಪರಿಗಣಿಸುವುದು. (ಈ ಅಧ್ಯಾಯದಲ್ಲಿನ ಮಹಾ ಜನಪದಗಳು ಮತ್ತು ಗಣರಾಜ್ಯಗಳು ವಿಷಯಾಂಶಗಳನ್ನು ಹೊರತು ಪಡಿಸಿ ಬೋಧಿಸುವುದು) |

17/6/2023

10

| | ಬದಲಾಯಿಸಿದ/ಸೇರಿಸಿದ ಅಧ್ಯಾಯ | ಬದಲಾಯಿಸಿದ/ಸೇರಿಸಿದ ಪಾಠದ/ವಿಷಯದ ವಿವರ |
|---|---|---|
| | | 6ನೇ ತರಗತಿ ಸಮಾಜ ವಿಜ್ಞಾನ ಭಾಗ-2 |
| | (ಪೌರನೀತಿ) ಮಾನವ ಹಕ್ಕುಗಳು, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು | 'ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು' ಅಧ್ಯಾಯದ ಆರಂಭದಲ್ಲಿ (ಪುಟ ಸಂಖ್ಯೆ: 121-124) 2017-18ನೇ ಸಾಲಿನ ಪಠ್ಯಪುಸ್ತಕದಲ್ಲಿರುವ 'ಮಾನವ ಹಕ್ಕುಗಳು' ಅಧ್ಯಾಯವನ್ನು ಸೇರ್ಪಡೆಗೊಳಿಸಿಕೊಂಡು ಬೋಧಿಸುವುದು. ಬೋಧನೆ ಮತ್ತು ಕಲಿಕೆಗೆ ಪರಿಗಣಿಸುವುದು. |
| | | 7ನೇ ತರಗತಿ ಸಮಾಜ ವಿಜ್ಞಾನ ಭಾಗ-1 |
| 5 | (ಇತಿಹಾಸ) ಜಗತ್ತಿನ ಪ್ರಮುಖ ಘಟನೆಗಳು | ಈ ಅಧ್ಯಾಯದಲ್ಲಿ ಬರುವ 'ರಿಲಿಜನ್' ಎಂಬ ಪದಕ್ಕೆ ಪರ್ಯಾಯವಾಗಿ 'ಧರ್ಮ' ಪದವನ್ನು ಬಳಸುವುದು. |
| 6 | ಮೈಸೂರು ಮತ್ತು ಇತರ ಸಂಸ್ಥಾನಗಳು | 2017-18ನೇ ಸಾಲಿನ ಪಠ್ಯಪುಸ್ತಕದಲ್ಲಿರುವ ಪುಟ ಸಂಖ್ಯೆ 50-58ರವರೆಗಿನ ವಿಷಯಾಂಶಗಳಾದ 'ಮುಮ್ಮಡಿ ಕೃಷ್ಣರಾಜ ಒಡೆಯರ್, ಕಮಿಷನರ್‌ಗಳ ಆಡಳಿತ, ಹತ್ತನೆಯ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್. ಎಂ. ವಿಶ್ವೇಶ್ವರಯ್ಯ ಮತ್ತು ಸರ್. ಮಿರ್ಜಾ ಇಸ್ಮಾಯಿಲ್' ಕುರಿತ ವಿಷಯಾಂಶಗಳನ್ನು ಬೋಧನೆ ಮತ್ತು ಕಲಿಕೆಗೆ ಪರಿಗಣಿಸುವುದು. |
| | | 7ನೇ ತರಗತಿ ಸಮಾಜ ವಿಜ್ಞಾನ ಭಾಗ-2 |
| 7 | ಸಾಮಾಜಿಕ ಮತ್ತುಧಾರ್ಮಿಕ ಸುಧಾರಣೆಗಳು | 2017-18ನೇ ಸಾಲಿನ ಪಠ್ಯಪುಸ್ತಕದಲ್ಲಿ ಇರುವ ಪುಟ ಸಂಖ್ಯೆ 32-34ರಲ್ಲಿರುವ 'ಮಹಿಳಾ ಸಮಾಜ ಸುಧಾರಕಿಯರು' ವಿಷಯಾಂಶವನ್ನು ಬೋಧನಾ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸುವುದು. |
| 8 | ಸ್ವಾತಂತ್ರ್ಯ ಸಂಗ್ರಾಮ | ಈ ಅಧ್ಯಾಯದ ಪುಟ ಸಂಖ್ಯೆ 42ರಲ್ಲಿ 'ಮಾಪಿಳ್ಳೆ ದಂಗೆ' ವಿಷಯಾಂಶದ ನಂತರ 2017-18ನೇ ಸಾಲಿನ ಪಠ್ಯಪುಸ್ತಕದಲ್ಲಿನ ಪುಟ ಸಂಖ್ಯೆ 84-91 ರವರೆಗಿನ 'ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು' ಎಂಬ ವಿಷಯಾಂಶವನ್ನು ಬೋಧನಾ ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸುವುದು. |

17/6/2023

| ಬದಲಾಯಿಸಿದ/ಸೇರಿಸಿದ ಅಧ್ಯಾಯ | ಬದಲಾಯಿಸಿದ/ಸೇರಿಸಿದ ಪಾಠದ/ವಿಷಯದ ವಿವರ |
|---|---|
| **10ನೇ ತರಗತಿ ಸಮಾಜ ವಿಜ್ಞಾನ ಭಾಗ-1** | |
| (ರಾಜ್ಯಶಾಸ್ತ್ರ)<br>**ಭಾರತಕ್ಕಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳು** | ಪ್ರಸ್ತುತ ಅಧ್ಯಾಯದಲ್ಲಿನ ಪುಟ ಸಂಖ್ಯೆ 56-57 ರಲ್ಲಿ "**ಅತಿಯಾದ ಭಾಷಾಭಿಮಾನವು ರಾಷ್ಟ್ರೀಯವಾದದ ವಿರುದ್ಧ ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ. ಪ್ರಾದೇಶಿಕ ವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ. ಇತ್ತೀಚೆಗೆ ಆಂಧ್ರಪ್ರದೇಶದಲ್ಲಿನ ತೆಲಂಗಾಣ ಭಾಗದ ಪ್ರಾದೇಶಿಕವಾದದ ಹೋರಾಟವನ್ನು ಗಮನಿಸಬಹುದು. ದೇಶದ ಇನ್ನಿತರ ಭಾಗಗಳಲ್ಲಿ ನಡೆಯುತ್ತಿರುವ ಪ್ರಾದೇಶಿಕ ವಾದದ ಹೋರಾಟಗಳು ಕೂಡ ದೇಶದ ಅಭಿವೃದ್ಧಿಗೆ ತೊಡಕಾಗುವ ಸಾಧ್ಯತೆಗಳಿವೆ.<br><br>ಇಂತಹ ಸಂಕುಚಿತ ಪ್ರಾದೇಶಿಕ ವಾದವನ್ನು ದೂರೀಕರಿಸಲು ನಮ್ಮ ಭಾರತ ಸಂವಿಧಾನವೇ ಹಲವಾರು ಮಾರ್ಗಗಳನ್ನು ಸೂಚಿಸಿದೆ.**" ಈ ಮೇಲಿನ ಸಾಲುಗಳನ್ನು ಬೋಧನಾ ಕಲಿಕೆಗೆ ಪರಿಗಣಿಸದಿರುವುದು. |

Hosamath 17/6/2023

**(ಮಹಾಂತಯ್ಯ ಎಸ್. ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)